KATK010033472020

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.205/2020</u>**

ಪ್ರಾ.ಸಾ. ಃ **4**

ದೋ.ಸಾ. ಃ **9**

ದಿ.**19.03.2025**

ಹೆಸರು ಃ ಮೊಹಮದ್ ನಯಾಜ್ ಪಾಶ

ತಂದೆಯ ಹೆಸರು ಃ ಮೊಹಮದ್ ದಸ್ತಗೀರ್

ವಯಸ್ಸು ಃ **50** ವರ್ಷ

ಉದ್ಯೋಗ ಃ ಮುಖ್ಯ ಪೇದೆ ನಂ.**429,** ತುಮಕೂರು ನಗರ ಪೋಲೀಸ್ ಠಾಣೆ

ವಾಸಸ್ಥಳ ಃ ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ನಾನು ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ 2017 ರಿಂದ 2022 ರವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೆನು.
2. ದಿ.25.06.2020 ರಂದು ನನಗೆ ಮತ್ತು ಚಾ ಸಾ 10 ರಂಗಸ್ವಾಮಿಯವರಿಗೆ ಗಸ್ತು ಮಾಡಲು ನೇಮಕ ಮಾಡಿದ್ದರು. ಆ ದಿನ ಮಧ್ಯಾಹ್ನ 3.30 ಗಂಟೆಗೆ ಗಸ್ತು ಮಾಡಿಕೊಂಡು ಅಹೋಬಲ ಅಗ್ರಹಾರಕ್ಕೆ ಹೋದೆವು. ಆ ಸಮಯದಲ್ಲಿ ಮೂಡಲಯ್ಯನವರ ಮಗ ದೊಡ್ಡ ತಿಮ್ಮಯ್ಯ ಅವರ ಅಡಿಕೆ ತೋಟದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿ, ಅವುಗಳನ್ನು ಕಿತ್ತು ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿತು. ನಾನು ಮತ್ತು ರಂಗಸ್ವಾಮಿ ದೊಡ್ಡತಿಮ್ಮಯ್ಯನವರ ಜಮೀನಿನ ಕಡೆಗೆ ಹೋದೆವು. ನಾವು ಹೋದಾಗ ಒಬ್ಬ ವ್ಯಕ್ತಿ ಪ್ಲಾಸ್ಟಿಕ್ ಚೀಲದಲ್ಲಿ ಗಾಂಜಾ ಗಿಡಗಳನ್ನು ಹಾಕಿಕೊಂಡು ತರುತ್ತಿದ್ದನು. ನಾವು ಆತನನ್ನು ನಿಲ್ಲಿಸಿ ಚೆಕ್ ಮಾಡಿ ನನ್ನ ಜೊತೆಯಲ್ಲಿದ್ದ ರಂಗಾಸ್ವಮಿಯವರು ಪಿಎಸ್‌ಐ ಲಕ್ಷ್ಮಯ್ಯನವರಿಗೆ ಫೋನ್ ಮಾಡಿದರು. ಫೋನ್ ಮಾಡಿದ ನಂತರ ಪಿಎಸ್‌ಐ

ಲಕ್ಷ್ಮಯ್ಯನವರು ಮಧ್ಯಾಹ್ನ 3.50 ಗಂಟೆಗೆ ಸ್ಥಳಕ್ಕೆ ಬಂದರು. ಪಿಎಸ್ಐ ರವರು ದೊಡ್ಡ ತಿಮ್ಮಯ್ಯನ ಕೈಯಲ್ಲಿದ್ದ ಬ್ಯಾಗನ್ನು ಚೆಕ್ ಮಾಡಿದಾಗ ಅದರಲ್ಲಿ 5 ಗಾಂಜಾ ಗಿಡಗಳು ಕಂಡುಬಂದವು. ಅವುಗಳನ್ನು ಕೈನಲ್ಲಿ ತಿಕ್ಕಿ ವಾಸನೆ ನೋಡಿದಾಗ ಗಾಂಜಾ ಸೊಪ್ಪು ಎಂದು ಖಾತ್ರಿಯಾಯಿತು. ಆರೋಪಿಯನ್ನು ವಿಚಾರಿಸಿದಾಗ ಅವು ಗಾಂಜಾ ಗಿಡಗಳು, ತನ್ನ ಜಮೀನಿನಲ್ಲಿ ಬೆಳೆದಿದ್ದು ಎಂದು ಹೇಳಿದನು. ಅದನ್ನು ಮಾರಾಟ ಮಾಡಿದರೆ ಲಾಭ ಬರುತ್ತದೆ ಎಂದು ಮಾರಾಟ ಮಾಡಲು ಕೊಂಡುಹೋಗುತ್ತಿದ್ದೇನೆ ಎಂದು ಹೇಳಿದನು. ನಂತರ ಪಿಎಸ್ಐ ಲಕ್ಷ್ಮಯ್ಯನವರು ವರದಿ ತಯಾರಿಸಿ, ರಂಗಸ್ವಾಮಿಯವರಿಗೆ ಕೊಟ್ಟು ಪೋಲೀಸ್ ಠಾಣೆಗೆ ಕಳುಹಿಸಿದರು.

3. ಆ ವರದಿಯ ಆಧಾರದ ಮೇಲೆ ಚಂದ್ರಕಲಾ ಪಿಎಸ್ಐ ರವರು ಮೊ.ನಂ.113/2020 ಎಂದು ಪ್ರಕರಣ ದಾಖಲು ಮಾಡಿದರು. ನಂತರ ತಹಸೀಲ್ದಾರ್, ಚಂದ್ರಕಾಂತ್, ಶ್ರೀಕಾಂತರವರ ಜೊತೆಗೆ ತೂಕ ಮಾಪನವನ್ನು ತೆಗೆದುಕೊಂಡು ಸ್ಥಳಕ್ಕೆ ಬಂದರು. ನಂತರ ಸ್ಥಳದಲ್ಲಿ ಸಾಯಂಕಾಲ 6.15 ಗಂಟೆಗೆ ಮಹಜರ್ ಬರೆಯಲು ಪ್ರಾರಂಭಿಸಿದರು. ಕತ್ತಲೆಯಾಗಿದ್ದರಿಂದ ಆರೋಪಿಯ ಮನೆಗೆ ಹೋದೆವು. ಅಲ್ಲಿ ಚಪ್ಪರ ಹಾಕಿದ್ದರು, ವಿದ್ಯುಚ್ಛಕ್ತಿ ಬೆಳಕು ಇತ್ತು. ನಂತರ ಆ ಗಾಂಜಾ ಗಿಡಗಳನ್ನು ಅಳತೆ ಮಾಡಿ, ತೂಕ ಮಾಡಿದರು. ಆ 5 ಗಾಂಜಾಗಳ ಒಟ್ಟು ತೂಕ 3 ಕೆಜಿ 900 ಗ್ರಾಂ ಇತ್ತು. ಆ ಗಾಂಜಾ ಗಿಡಗಳನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಅದರ ಬಾಯನ್ನು ಕಟ್ಟಿ, ಸೀಲ್ ಮಾಡಿದರು. ನಂತರ ಸ್ಥಳದಲ್ಲಿ ಮಹಜರ್ ಮಾಡಿದರು.

4. ಆ ಗಾಂಜಾ ಗಿಡಗಳನ್ನು ಬೆಳೆದ ಜಾಗಕ್ಕೆ ಹೋದೆವು. ಆ ಚಪ್ಪರ ಹಾಕಿದ ಜಾಗದಿಂದ ಗಾಂಜಾ ಗಿಡಗಳನ್ನು ಬೆಳೆದ ಜಾಗ ಸುಮಾರು 50 ಮೀಟರ್ ದೂರದಲ್ಲಿತ್ತು. ಆ ಗಾಂಜಾ ಗಿಡಗಳನ್ನು ಬೆಳೆದ ಸುತ್ತಮುತ್ತ ಟೊಮ್ಯಾಟೋ ಗಿಡ, ಬೀನ್ಸ್ ಗಿಡಗಳು ಇದ್ದವು. ಗಾಂಜಾ ಬೆಳೆದಿದ್ದಾರೆಂದು ಹೇಳುವ ಜಾಗದಲ್ಲಿ 5 ಗಿಡಗಳನ್ನು ಹೊಸದಾಗಿ ಕಿತ್ತ ಕುರುಹುಗಳು ಕಂಡುಬಂತು. ದೊಡ್ಡತಿಮ್ಮಯ್ಯ ಎಂದರೆ ನ್ಯಾಯಾಲಯದ ಮುಂದೆ ಕುಳಿತಿರುವ ಆರೋಪಿ. ಆ ದಿನ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು ಮಹಜರನ್ನು ಈಗಾಗಲೇ ನಿಶಾನೆ ಪಿ1 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಶಾನೆ ಪಿ4 ರಿಂದ 23 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು ಶ್ರೀ.ಟಿ.ಎಸ್.ಕೃಷ್ಣಶಾಸ್ತ್ರಿ ವಕೀಲರಿಂದ ಆರೋಪಿತನ ಪರವಾಗಿ :**

**5.** ಮಧ್ಯಾಹ್ನ 2.00 ಗಂಟೆಗೆ ನಮ್ಮನ್ನು ಗಸ್ತಿಗೆ ನೇಮಕ ಮಾಡಿದ್ದರು. ಪಿಎಸ್ಐ ಲಕ್ಷ್ಮಯ್ಯರವರು ನೇಮಕ ಮಾಡಿದ್ದರು. ನಮ್ಮನ್ನು ನೇಮಕ ಮಾಡಿದ ಬಗ್ಗೆ ಠಾಣೆಯಲ್ಲಿ ಬರೆದಿರುತ್ತಾರೆ. ನಮಗೆ ಮೌಖಿಕವಾಗಿ ಆದೇಶ ಮಾಡಿದ್ದರು, ಲಿಖಿತವಾದ ಆದೇಶ ಇಲ್ಲ. ಗಸ್ತು ಮಾಡಲು ನಮಗೆ ಒಂದೊಂದು ಪ್ರದೇಶವನ್ನು ಹೇಳುತ್ತಾರೆ. ಆ ದಿನ ಅಂತರಸನಹಳ್ಳಿ, ಯಲ್ಲಾಪುರ, ಹೊಸಹಳ್ಳಿ, ಅಹೋಬಲ ಅಗ್ರಹಾರ, ಬೆಳಧರ, ಹನುಮಂತಗಿರಿಯವರೆಗೆ ಗಸ್ತು ಮಾಡಲು ಹೇಳಿದ್ದರು. ಠಾಣೆಯಿಂದ ಹೊರಡುವಾಗ 2.00 ಗಂಟೆಯಾಗಿತ್ತು. ಬೆಳಧರ ಕೋರಾ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ರಸ್ತೆಯ ಬಲಬದಿಗೆ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ, ಎಡಗಡೆಗೆ ಕೋರಾ ಪೋಲೀಸ್ ಠಾಣೆಯ ವ್ಯಾಪ್ತಿ ಬರುತ್ತದೆ. ತುಮಕೂರು-ಮಧುಗಿರಿ ರಸ್ತೆ ದಕ್ಷಿಣ-ಉತ್ತರ ಇದೆ. ಅಹೋಬಲ ಅಗ್ರಹಾರಕ್ಕೆ ಪೂರ್ವಕ್ಕೆ ತಿರುಗಬೇಕು. ಅಹೋಬಲ ಅಗ್ರಹಾರ ರಸ್ತೆಗೆ ಹೋಗುವ ರಸ್ತೆಯ ಎರಡೂ ಬದಿ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ. ಆ ರಸ್ತೆಯ ದಕ್ಷಿಣ ಪ್ರದೇಶ ಮಾತ್ರ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ, ಉತ್ತರದ ಪ್ರದೇಶ ಕೋರಾ ಪೋಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿಯಲ್ಲ. ಆ ರಸ್ತೆಗೆ ಹೊಂದಿಕೊಂಡಂತೆ ದೇವಸ್ಥಾನ ಇದೆ, ದೇವಸ್ಥಾನಕ್ಕೆ ಹೊಂದಿಕೊಂಡಂತೆ ಆರೋಪಿಯ ಮನೆ ಇದೆ. ಆರೋಪಿ ಗಾಂಜಾ ಬೆಳೆದ ಬಗ್ಗೆ ಮಧ್ಯಾಹ್ನ 3.00 ಗಂಟೆಗೆ ಮಾಹಿತಿ ಬಂದಿತು. ಆರೋಪಿಯನ್ನು ಅವನ ಜಮೀನಿನ ಹತ್ತಿರ ಹಿಡಿದುಕೊಂಡೆವು. ಅವನ ಜಮೀನಿನಿಂದ ಮನೆಗೆ 75 ಮೀಟರ್ ದೂರವಿದೆ. ನಾವು ಮಾಹಿತಿ ಬಂದು ಅಲ್ಲಿಗೆ ಹೋಗುವಾಗ ದೊಡ್ಡತಿಮ್ಮಯ್ಯ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ದಾರಿಯಲ್ಲಿ ಬರುತ್ತಿದ್ದರು. ಆ ದಾರಿ ಅಹೋಬಲ ಅಗ್ರಹಾರದ ಮುಖ್ಯ ದಾರಿ. ಪಿಎಸ್ಐ ಬರುವುದನ್ನು ಕಾಯುತ್ತಾ ಆ ಸ್ಥಳದಲ್ಲಿಯೇ ನಿಂತಿದ್ದೆವು. ಸ್ಥಳ ಎಂದರೆ ಆರೋಪಿಯ ಜಮೀನಿನ ಪಕ್ಕ. ಮಧ್ಯಾಹ್ನ 4.00 ಗಂಟೆಗೆ ಪಿಎಸ್ಐ ರವರು ವರದಿಯನ್ನು ಕಳುಹಿಸಿದರು. ತಹಸೀಲ್ದಾರ್ ಬಂದಾಗ 6.00 ಗಂಟೆಯಾಗಿತ್ತು. ನಮ್ಮ ಪೋಲೀಸ್ ಠಾಣೆಯಿಂದ ಘಟನಾ ಸ್ಥಳ 9 ಕಿ ಮೀ ದೂರ. ತುಮಕೂರು ಮಧುಗಿರಿ ರಸ್ತೆ ತುಂಬಾ ವಾಹನ ಸಂಚಾರ ಇರುವ ರಸ್ತೆ. ಠಾಣೆಯಿಂದ ಆ ಸ್ಥಳಕ್ಕೆ ಬರಲು ಅರ್ಧ ಗಂಟೆ ಬೇಕು.

**6.** ಆರೋಪಿಯ ಮನೆಯಿಂದ ಪೂರ್ವದ ಕಡೆಗೆ ಬದುವಿನಿಂದ 3 ಅಡಿ ನಂತರ

ರಂಗಧಾಮಯ್ಯನವರ ಮನೆ ಇದೆ ಎಂದರೆ ಸರಿಯಲ್ಲ. ಆ **3** ಅಡಿ ಜಾಗದ ಬಗ್ಗೆ ಆರೋಪಿಗೂ ರಂಗಧಾಮಯ್ಯನವರಿಗೂ ಜಗಳ ಇದೆ ಎಂದರೆ ಸರಿಯಲ್ಲ. ಘಟನಾ ಸ್ಥಳ ಕೋರಾ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಆರೋಪಿ ಮನೆ ಮುಂದುಗಡೆ ಡಬ್ಬದಲ್ಲಿ ಟೊಮ್ಯಾಟೋ ತುಂಬುತ್ತಿದ್ದನು ಎಂದರೆ ಸರಿಯಲ್ಲ. ತಹಸೀಲ್ದಾರ್ ಬರುವ ಮೊದಲು ನಾವು **3** ಮಂದಿ ಆ ಘಟನಾ ಸ್ಥಳದಲ್ಲಿದ್ದೆವು. ತಹಸೀಲ್ದಾರ್ ಬರುವಾಗ ನಾವು ಘಟನಾ ಸ್ಥಳದಲ್ಲಿದ್ದೆವು. ಆರೋಪಿ ಗಾಂಜಾ ಹಿಡಿದುಕೊಂಡು ಬರುತ್ತಿದ್ದ ಚೀಲವನ್ನು ಜಪ್ತು ಮಾಡಿದರು. ನಾವು ಹೇಳುವಂತಹ ಘಟನೆ ನಡೆದಿಲ್ಲ, ನಾವು ಆರೋಪಿ ಮನೆ ಹತ್ತಿರ ಹೋಗಿಲ್ಲ, ಆರೋಪಿ ಯಾವುದೇ ಗಾಂಜಾ ಗಿಡಗಳನ್ನು ಕಿತ್ತು ಬ್ಯಾಗಿನಲ್ಲಿ ತರುತ್ತಿರಲಿಲ್ಲ, ಯಾವುದೇ ಗಾಂಜಾ ಗಿಡಗಳನ್ನು ತನ್ನ ಜಮೀನಿನಲ್ಲಿ ಬೆಳೆದಿಲ್ಲ ಎಂದರೆ ಸರಿಯಲ್ಲ. ರಂಗಧಾಮಯ್ಯನವರ ಜೊತೆಗೆ ಶರೀಕಾಗಿ ನಮ್ಮ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರದಿದ್ದರೂ ಕೂಡಾ ಸುಳ್ಳು ಪ್ರಕರಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಜಮೀನಿನಲ್ಲಿ ಗಾಂಜಾ ಬೆಳೆದ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು